# ರಿಸ್ಕ್ ತೆಗೆದುಕೊಳ್ಳದೆ ಬದುಕಿಲ್ಲ

**‘ಸಲಗ’ ಸಿನಿಮಾ ಮೂಲಕ ನಟ ದುನಿಯಾ ವಿಜಯ್ ನಿರ್ದೇಶಕನ ಟೋಪಿ ಧರಿಸಿರುವುದು ಗೊತ್ತೇ ಇದೆ. ಈಗ ಅವರು ಇನ್ನೂ ಒಂದು ಹೆಜ್ಜೆ ಮುಂದೆ ಇಟ್ಟಿದ್ದಾರೆ. ಇನ್ನೊಂದು ಪ್ರೇಮಕಥೆಗೆ ಆಕ್ಷನ್ ಕಟ್ ಹೇಳುತ್ತಿದ್ದಾರೆ. ಈ ಸಿನಿಮಾದಲ್ಲಿ ಹಲವು ಹೊಸ ಕಲಾವಿದರನ್ನು ಪರಿಚಯಿಸುತ್ತಿದ್ದಾರೆ. ಸ್ಟಾರ್ ನಟನೊಬ್ಬ ನಿರ್ದೇಶನಕ್ಕೆ ಇಳಿಯುವುದು, ತಮ್ಮ ನಿರ್ದೇಶನದ ಸಿನಿಮಾದಲ್ಲಿ ಹೊಸಬರಿಗೆ ಅವಕಾಶ ಕೊಡುವುದು ಕನ್ನಡದ ಮಟ್ಟಿಗಂತೂ ವಿಶೇಷವೇ ಸರಿ. ಈ ಪ್ರಯತ್ನದ ಹಿಂದಿನ ಉದ್ದೇಶದ ಕುರಿತು ವಿಜಯ್ ಇಲ್ಲಿ ಮಾತಾಡಿದ್ದಾರೆ.**

■ ಪದ್ಮನಾಭ ಭಟ್

◆ **‘ಸಲಗ’ ನಂತರ ಇನ್ನೊಂದು (ಶೀರ್ಷಿಕೆ ಇನ್ನೂ ಅಂತಿಮಗೊಂಡಿಲ್ಲ) ಸಿನಿಮಾ ನಿರ್ದೇಶಿಸುತ್ತಿದ್ದೀರಿ. ಅದರಲ್ಲಿ ನೀವು ನಟಿಸದೇ ಇರುವುದಕ್ಕೆ ಕಾರಣವೇನು?**

ಒಳ್ಳೆಯ ಕಥೆಗಳು ಇತಿಹಾಸದಲ್ಲಿ ಸ್ಥಾನ ಪಡೆದುಕೊಳ್ಳುತ್ತವೆ. ಈ ಕಥೆಯನ್ನು ಬರೆದಾಗಲೇ ಇದು ನನಗೆ ಹೊಂದುವುದಿಲ್ಲ ಎಂದು ಅನಿಸಿತು. ಹಾಗಾಗಿ ಇದನ್ನು ಮತ್ತೊಬ್ಬರಿಗೆ – ಅದರಲ್ಲಿಯೂ ಹೊಸಬರಿಗೆ ಮಾಡಿದರೆ ಚೆನ್ನಾಗಿರುತ್ತದೆ ಅನಿಸಿತು. ನಮ್ಮ ಬಳಿಯಿರುವ ವಸ್ತುವೊಂದು ನಮ್ಮದಲ್ಲ ಅನಿಸಿದಾಗ ಇನ್ನೊಬ್ಬರಿಗೆ ಕೊಡುವುದು ಒಳ್ಳೆಯದು. ಈ ಮನಸ್ಸು ಎಲ್ಲರಿಗೂ ಇರುವುದಿಲ್ಲ. ಎಲ್ಲವೂ ನನಗೇ ಬೇಕು ಎಂದೇ ಬಹುತೇಕ ಎಲ್ಲ ಬಯಸುತ್ತಾರೆ. ಆದರೆ ಅದು ಸರಿಯಲ್ಲ.

◆ **ಹಲವು ಹೊಸ ಕಲಾವಿದರನ್ನು ಪರಿಚಯಿಸುವ ರಿಸ್ಕ್ ಕೂಡ ತೆಗೆದುಕೊಳ್ಳುತ್ತಿದ್ದೀರಲ್ಲ?**

ರಿಸ್ಕ್‌ಗಳನ್ನು ತೆಗೆದುಕೊಂಡು ಗೆದ್ದಾಗ ಅದರ ಮಜವೇ ಬೇರೆ ಇರುತ್ತದೆ. ಪ್ರತಿಯೊಬ್ಬ ಮನುಷ್ಯನ ಬದುಕು, ಪ್ರತಿದಿನವೂ ರಿಸ್ಕ್‌ನಲ್ಲಿಯೇ ಇರುತ್ತದೆ. ಯಾವತ್ತು ರಿಸ್ಕ್ ಇಲ್ಲ ಹೇಳಿ? ಇಂದು ಕೊರೊನಾ ರಿಸ್ಕ್‌ನಲ್ಲಿದ್ದೀವಿ; ಮಾಲಿನ್ಯದ ರಿಸ್ಕ್‌ನಲ್ಲಿದ್ದೀವಿ; ವಯಸ್ಸಿನ ವ್ಯತ್ಯಾಸವೇ ಇಲ್ಲದ ಹಾಗೆ ಪ್ರತಿದಿನ ಜನ ಸಾಯುತ್ತಿದ್ದಾರೆ... ಹೀಗೆ ಹೆಜ್ಜೆ ಹೆಜ್ಜೆಗೂ ರಿಸ್ಕ್‌ಗಳಿರುವಾಗ ಇದು ನನಗೆ ರಿಸ್ಕ್ ಅನಿಸಲೇ ಇಲ್ಲ. ಇದೊಂದು ಚಾಲೆಂಜ್ ಕೂಡ ಅಲ್ಲ. ನಾನು ಯಾರಿಗೂ ಚಾಲೆಂಜ್ ಕೂಡ ಮಾಡ್ತಿಲ್ಲ. ನನಗನಿಸಿದ್ದು, ಈ ಪಾತ್ರಗಳಿಗೆ ಹೊಸಬರು, ನನಗಿಂತ ವಯಸ್ಸು ಕಡಿಮೆ ಇರುವವರು ಬೇಕು ಎಂದು. ಹಾಗಾಗಿ ಧೈರ್ಯ ಮಾಡಿ ಮಾಡುತ್ತಿದ್ದೇನೆ. ನಾನು ಯಾವತ್ತೂ ಇಂಥ ಧೈರ್ಯಗಳನ್ನು ಮಾಡಿಕೊಂಡೇ ಬಂದಿದ್ದೇನೆ.



◆ **ನಟನಾಗಿ ಜನಪ್ರಿಯರಾಗಿರುವ ನಿಮಗೆ ನಿರ್ದೇಶನದ ಕಡೆಗೆ ಹೋಗಬೇಕು ಎಂದು ಯಾಕೆ ಅನಿಸಿತು?**

ಕೆಲವು ಸಲ ಕೆಲವು ಕೆಲಸಗಳನ್ನು ನಾವೇ ಮಾಡಬೇಕಾಗುತ್ತದೆ. ಬೇರೆಯವರು ಮಾಡಿದಾಗ ನಮ್ಮ ಮಟ್ಟಕ್ಕೆ ಏರಿರುವುದಿಲ್ಲ. ಇದು ತುಂಬ ಒಳ್ಳೆಯ ಕಲ್ಟ್ ಲವ್ ಸ್ಟೋರಿ. ಕೆಲವು ನೈಜ ಘಟನೆ ಆಧಾರಿತವಾಗಿರುವ ಸಿನಿಮಾ. ಹೆಣ್ಣುಮಕ್ಕಳಿಗೆಲ್ಲ ತುಂಬ ಇಷ್ಟವಾಗುವ ಹೃದಯಂಗಮ ಸಿನಿಮಾ ಆಗುತ್ತದೆ. ಇದನ್ನು ನಾನೇ ನಿರ್ದೇಶನ ಮಾಡಬೇಕು ಅನಿಸಿತು.

◆ **ಒಬ್ಬ ನಟನಾಗಿ ನೀವು ನಿರ್ದೇಶನ ಮಾಡುವಾಗ ಎದುರಿಸಿದ ಸವಾಲುಗಳೇನು?**

ನನಗಿರುವ ಅನುಭವವೇ ನನ್ನ ಶಕ್ತಿ. ನನಗೀಗ ನಲ್ವತ್ತಾರು ವರ್ಷ. ಹನ್ನೆರಡು ವರ್ಷದವನಾಗಿದ್ದಾಗ ಸಿನಿಮಾ ನೋಡುವ ಚಾಳಿ ಹತ್ತಿಕೊಂಡಿದ್ದು. ಏನಿಲ್ಲ ಅಂದರೂ ಇಪ್ಪತ್ತೈದು ವರ್ಷಗಳ ಅನುಭವ ಇದೆ. ನನಗೆ ಇರುವ ಅನುಭವಗಳನ್ನು ಬಳಸಿಕೊಂಡು ದೃಶ್ಯಗಳಲ್ಲಿ ಭಾವನೆಗಳನ್ನು ತುಂಬಬಹುದು. ಈ ಸಿನಿಮಾದಲ್ಲಿ ಇಬ್ಬರೂ ಹೊಸಬರೇ ಆಗಿರುವುದರಿಂದ ನನ್ನ ಅಗತ್ಯಕ್ಕೆ ತಕ್ಕ ಹಾಗೆ ಬಳಸಿಕೊಳ್ಳಬಹುದು. ನಮ್ಮ ಅನುಭವಗಳನ್ನು ಅವರಲ್ಲಿ ತುಂಬಿ ಪಾತ್ರಗಳನ್ನು ಮೇಲಕ್ಕೆತ್ತಬಹುದು.

◆ **ಲಕ್ಕಿ ಗೋಪಾಲ್ ಅವರನ್ನೇ ಯಾಕೆ ನಾಯಕನಾಗಿ ಆಯ್ದುಕೊಂಡಿರಿ?**

ಅವರು ಒಂದು ಸಿನಿಮಾ ನಿರ್ದೇಶನ ಮಾಡಬೇಕಿತ್ತು. ಸದ್ಯದಲ್ಲಿಯೇ ನಿರ್ದೇಶನ ಮಾಡುತ್ತಾರೆ ಕೂಡ. ಅವರು ನಮ್ಮ ಸೆಟ್‌ಗೆ ಬರುತ್ತಿದ್ದರು. ಅವರನ್ನು ನೋಡಿ ನನ್ನ ಕಥೆಯ ಪಾತ್ರಕ್ಕೆ ತುಂಬ ಚೆನ್ನಾಗಿ ಹೊಂದುತ್ತಾರೆ ಅನಿಸಿತು. ಹಾಗಾಗಿ ಅವರನ್ನು ಆಯ್ಕೆ ಮಾಡಿಕೊಂಡೆ. ನಾಯಕಿಯಾಗಿ ಮೋಕ್ಷಿತಾ ಪೈ ಇದ್ದಾರೆ. ಚರಣ್ ರಾಜ್ ಮತ್ತು ವಾಸುಕಿ ವೈಭವ್ ಸಂಗೀತ ನಿರ್ದೇಶನ ಮಾಡುತ್ತಿದ್ದಾರೆ. ಬಾಲು ಶಿವಮೊಗ್ಗ ಅನ್ನುವವರ ಛಾಯಾಗ್ರಹಣ ಇದೆ. ಮಾಸ್ತಿ ಸಂಭಾಷಣೆ ಬರೆಯುತ್ತಿದ್ದಾರೆ.

◆ **‘ಸಲಗ’ ಸಿನಿಮಾ ಯಾವಾಗ ಬಿಡುಗಡೆ?**

ಸರ್ಕಾರ ಈಗ ಎರಡು ಥರ ಕೆಲಸ ಮಾಡ್ತಾ ಇದೆ. ಒಂದು, ಟ್ರಾಫಿಕ್‌ನಲ್ಲಿ ನಿಂತುಕೊಂಡು ಗಾಡೀಲಿ ಓಡಾಡುವವರ ಬಳಿ ದಂಡ ವಸೂಲಿ ಮಾಡುವುದು. ಇನ್ನೊಂದು, ನಾವು ಕೆಲಸ ಮಾಡ್ತಾ ಇದೀವಿ ಅಂತ್ಹೇಳಿ ಚಿತ್ರಮಂದಿರಗಳನ್ನು ಮುಚ್ಚಿಸಿರುವುದು. ಮಿಕ್ಕ ಕಡೆಗಳಲ್ಲೆಲ್ಲ ಕೊರೊನಾ ಬಂದವರ ಜೊತೆಗೆ ಬೇಕಾದ್ರೂ ಓಡಾಡಿ ಅಂತ ಬಿಟ್ಟು ಬಿಟ್ಟಿದಾರೆ. ಕಮರ್ಷಿಯಲ್ ಸ್ಟ್ರೀಟ್‌ನಲ್ಲಿ ಓಡಾಡಿ, ಗಾಂಧಿ ಬಜಾರ್‌ನಲ್ಲಿ ಓಡಾಡಿ, ಹೂವು ತೆಗೆದುಕೊಳ್ಳಲು ಮಾರ್ಕೆಟ್‌ಗೆ ನುಗ್ಗಿ, ಎಣ್ಣೆ ತೆಗೆದುಕೊಳ್ಳಲು ವೈನ್ ಷಾಪ್‌ಗೆ ನುಗ್ಗಿ, ಬಾರಿನಲ್ಲಿ ಕೂತುಕೊಂಡು ಒಂದೇ ಗ್ಲಾಸಿನಲ್ಲಿ ಆರು ಜನ ಕುಡಿಯುತ್ತಾ ಕೂಡಿ; ಆದ್ರೆ ಚಿತ್ರಮಂದಿರಕ್ಕೆ ಬರಬೇಡಿ ಅನ್ನೋ ರೀತಿ ವರ್ತಿಸುತ್ತಿದೆ. ಇಂಥ ವಾತಾವರಣದಲ್ಲಿ ಹೇಗೆ ಚಿತ್ರ ಬಿಡುಗಡೆ ಮಾಡುವುದು?

◆ **ಸರ್ಕಾರ ಚಿತ್ರಮಂದಿರಗಳನ್ನು ತೆರೆಯಲು ಅನುಮತಿ ಕೊಟ್ಟಿದೆಯಲ್ವಾ?**

ಕೊಟ್ಟಿದೆ. ಆದರೆ ಒಂದು ಸೀಟ್ ಬಿಟ್ಟು ಇನ್ನೊಂದು ಸೀಟ್‌ನಲ್ಲಿ ಕೂಡಬೇಕು ಅಂತ ನಿಯಮ ಇದೆ. ನಮಗೆ ಎಲ್ಲ ಸೀಟುಗಳೂ ಬೇಕಲ್ಲ. ಇಲ್ಲಾಂದ್ರೆ ನಾವು ‘ಹಾಫ್ ಹೌಸ್ ಫುಲ್’ ಅಂತ ಬೋರ್ಡ್ ಹಾಕ್ಕೊಬೇಕಾಗತ್ತೆ. ಎರಡನೇ ದಿನಕ್ಕೆ ಹೌಸ್‌ಫುಲ್ ಅಂತ ಹಾಕ್ಕೊಬೇಕಾಗತ್ತೆ. ಅದಕ್ಕೆ ಮನಸ್ಸಿಲ್ಲ ನಮಗೆ. ಹಾಗಾಗಿ ಪರಿಸ್ಥಿತಿ ಸರಿಹೋಗಲು ಕಾಯುತ್ತಿದ್ದೇವೆ. ■